ಅನ್ನುವುದು ಅವಳಿಗೇ ಗೊತ್ತಿತ್ತು. ಆದುದರಿಂದಲೇ ಮಗನ ಆಣೆಯನ್ನು ಮೀರಿ ಜೀವದ ಗೆಳತಿಯನ್ನು ಕಾಣಲು ಅವಳು ಮನಸ್ಸು ಮಾಡಲಿಲ್ಲ. ಸರಿ ಸುಮಾರು ಐವತ್ತು ವರ್ಷಗಳ ದೋಸ್ತಿ ಅಲ್ಲಿಗೇ ಕೊನೆಗೊಂಡಿತ್ತು.

ಉರಿಯುವ ಬೆಂಕಿಗೆ ನೀರು ಹೊಯ್ಯುವ ಮನಸ್ಸಿನವರು ಇಲ್ಲದೆ ಇದ್ದರೂ ಎಣ್ಣೆ ಹೊಯ್ಯುವವರ ಸಂಖ್ಯೆ ಆ ಊರಲ್ಲಿ ಏನೂ ಕಡಿಮೆ ಇರಲಿಲ್ಲ. ಪರಿಣಾಮವಾಗಿ ರಮೇಶನಿಗೆ ಗೋಪಾಲಣ್ಣನ ಮೇಲೆ ಜಿದ್ದು ಹೆಚ್ಚುತ್ತಲೇ ಹೋಯಿತು. ಅಲ್ಲಿಯ ವರೆಗೆ ತನ್ನ ದುಡ್ಡಿನ ದೌಲತ್ತನ್ನು ಹೊರಗೆ ತೋರಿಸದವ ಈಗ ಎಲ್ಲಾ ಕಡೆ ಖರ್ಚು ಮಾಡಲಾರಂಭಿಸಿದ. ಅವರು ಮೂರು ಕೊಡುವಲ್ಲಿ ಇವನು ಆರು ಕೊಡತೊಡಗಿದ. ಊರಿನ ಎಲ್ಲಾ ದೇವಸ್ಥಾನ, ಭೂತಸ್ಥಾನಗಳಿಗೂ ಅಕ್ಕುವಿನ ಹೆಸರಲ್ಲಿ ಕಾಣಿಕೆ ಸಂದಾಯವಾಗತೊಡಗಿತು. ಸಜಪೆಯ ಎಲ್ಲಾ ಸಂಘ ಸಂಸ್ಥೆಗಳ ಪೋಷಕ ಸ್ಥಾನದಲ್ಲಿ ಅಕ್ಕು ಅಕ್ಕನ ಹೆಸರು ಕಾಣತೊಡಗಿತು. ಸಜಪೆಯ ಭಗವತಿ ದೇವಸ್ಥಾನದ ಜೀರ್ಣೋದ್ಧಾರದ ಸಮಯದಲ್ಲಿ 'ಗರ್ಭಗುಡಿಯ ನವೀಕರಣ ಅಕ್ಕು ಪೂಜಾರ್ತಿಯ ಕೊಡುಗೆ' ಎಂದು ಅಮೃತಫಲಕದ ಮೇಲೆ ಬರೆಯಲ್ಪಟ್ಟಿತು. ಆ ಬಾರಿ ಸಜಪೆ ಮೈದಾನದ ಪಕ್ಕದ ಗುಳಿಗನ ಕಟ್ಟೆಯಲ್ಲಿ ಗುಳಿಗ ದೈವದ ಕೋಲ ಪೂರ್ತಿಯಾಗಿ ರಮೇಶನ ಖರ್ಚಿನಲ್ಲಿ ನಡೆಯಿತು. ಊರಿನ ಹತ್ತು ಸಮಸ್ತರಿಗೆ ಮರ್ಯಾದಿ ಮಾಡುವ ಸಂದರ್ಭದಲ್ಲಿ ಖುದ್ದು ಗುಳಿಗನ ಕೈಯ್ಯಿಂದ ಅಕ್ಕು ಪೂಜಾರ್ತಿಗೆ ಬೊಂಡದ ಮರ್ಯಾದೆ ಸಂದಿತು. ಅಕ್ಕು ಪೂಜಾರ್ತಿಯ ತರವಾಡಿನಲ್ಲಿ ಕಲ್ಲುರ್ಟಿಯ ಗುಡಿ ನವೀಕರಣ, ನೇಮೋತ್ಸವ ಎಲ್ಲಾ, ಎಲ್ಲಾ ವಿಜೃಂಭಣೆಯಿಂದ ನಡೆದು ಸಜಪೆಯ ಅಕ್ಕು ಪೂಜಾರ್ತಿ ಎನ್ನುವ ವ್ಯಕ್ತಿಯನ್ನು ಇನ್ನೂ ಒಂದಿಷ್ಟು ಮಂದಿ ತಿಳಿಯುವಂತಾಯಿತು. ಈ ಮಧ್ಯೆ ಮಿಜಾರಿನ ಅನುಕೂಲಸ್ಥ ಮನೆಯಿಂದ ಮಾಲಿನಿ ಅಕ್ಕು ಪೂಜಾರ್ತಿಯ ಸೊಸೆಯಾಗಿ ಮನೆ ತುಂಬಿದ್ದಲ್ಲದೆ, ಮದುವೆಯಾಗಿ ಎರಡು ವರ್ಷದಲ್ಲೇ ಅವಳಿ ಮಕ್ಕಳನ್ನು ಹೆತ್ತು ಕೊಟ್ಟು ಅತ್ತೆಯ ಮನಸ್ಸನ್ನೂ ತುಂಬಿದ್ದಳು. ಸಜಪೆಯ ಕೊಗ್ಗು ಬೈದ್ಯನ ಒಂದೆಕೆರೆ ಜಾಗವನ್ನು ತೆಗೆದುಕೊಂಡ ರಮೇಶ ಮಾಳಿಗೆ ಮನೆಯನ್ನೂ ಕಟ್ಟಿಸಿದ್ದ. ಉದ್ಯೋಗದಲ್ಲಿ ಮೇಲು, ಮೇಲಕ್ಕೇರಿದ್ದ ಅವನೀಗ ಪಂಚಾಯತ್ ಸೆಕ್ರೆಟರಿ ಆದದ್ದಷ್ಟೇ ಅಲ್ಲ, ಜೊತೆಗೆ ಕನ್ನಡ ಮೀಸಲಾತಿ ಆಧಾರದಲ್ಲಿ ವರ್ಕಾಡಿ ಪಂಚಾಯತ್ ಸೆಕ್ರೆಟರಿ ಆಗಿ ಊರಿನವರ ದೃಷ್ಟಿಯಲ್ಲಿ ಇನ್ನೂ ಒಂದಿಂಚು ಮೇಲೇರಿದ್ದ.

ಆದರೆ, ಇದಾವುದೂ ಅಕ್ಕು ಪೂಜಾರ್ತಿಯ ಮನಸ್ಸಿನ ಖಾಲಿ ಕೋಣೆಯನ್ನು ತುಂಬಲಿಲ್ಲ ಎನ್ನಬೇಕು. ಸಜಪೆಯ ಗುಳಿಗನ ನೇಮೋತ್ಸವದಲ್ಲಿ ಗಂಟೆಗಟ್ಟಲೆ ಕಾದು ನಿಂತು, ಹನಿಗಣ್ಣಾಗಿ ಗುಳಿಗ ದೇವರ ಕೈಯ್ಯಿಂದ ಹಳದಿ ಪ್ರಸಾದವನ್ನು ಸ್ವೀಕರಿಸುವಾಗ ಸಿಗುವ ನೆಮ್ಮದಿ ಊರೊಟ್ಟಿನ ಬೊಂಡದ ಮರ್ಯಾದೆಯಲ್ಲಿ ಇರಲಿಲ್ಲ. ತರವಾಡಿನ ಅಗೆಲ್ ಬಡಿಸುವ ಕಾರ್ಯದಲ್ಲಿ ಚಾಕರಿಯ ಹೆಣ್ಣಾಗಿ ಎರಡು ದಿನ ಇಡೀ ತರವಾಡಿಗೆ ಸೆಗಣಿ ಸಾರಿಸಿ, ಗುಡಿಸಿ, ಪಾತ್ರೆ ತೊಳೆದು ಅಗೆಲಿನಂದು ಕಲ್ಲುರ್ಟಿ ಅಮ್ಮನ ಮಣೆಯೆದುರು ಸಾಷ್ಟಾಂಗ ಬಿದ್ದು "ಇಲ್ಲಿಯ ವರೆಗೆ ಕಾಪಾಡಿದ್ದೀ... ಮುಂದೆಯೂ ನಿನ್ನದೇ ಹೊಣೆ" ಅನ್ನುವ ಅಕ್ಕುವಿನ ನಿರಾಳತೆ ಅಗೆಲ್ ಬಡಿಸುವ ಒಂದಿಷ್ಟು ಮೊದಲು ಕಾರಿನಿಂದಿಳಿದು ಗುರಿಕಾರನ ಸ್ವಾಗತದೊಂದಿಗೆ ಕಲ್ಲುರ್ಟಿಯ ಮಣೆ ಯೆದುರು ನಿಂತು ಅಗೆಲ ಮೊದಲ ಪ್ರಸಾದ ಪಡೆಯುವ ಅಕ್ಕು ಪೂಜಾರ್ತಿಗೆ ಸಿಗುತ್ತಿರಲಿಲ್ಲ. ಅಂತಕ್ಕ ಶೆಡ್ತಿ ತೀರಿ ಹೋಗಿ ವರ್ಷ ಆರೇಳು ಸಂದಿದ್ದರೂ ಏನೇ ಒಳಿತು, ಕೆಡುಕುಗಳಾದರೂ ಮನಸ್ಸು ಈಗಲೂ ಮೊದಲು ನೆನೆಯುವುದು ಅಂತಕ್ಕನನ್ನೇ. ಅದರಲ್ಲೂ ಮಾಂಕು ಒಮ್ಮೆ ಮಾತನಾಡುವಾಗ, "ಜಾಗೆ ನಿಮ್ಗೆ ಕೊಡಬೇಕೂಂತಲೇ ಇತ್ತು ಅಂತಕ್ಕನಿಗೆ. ಆದರೆ, ಎಡ್ಡಿ ಸೋಜರ ಮಗ ನೀವು ಕೇಳುವ ತಿಂಗಳ ಹಿಂದೆಯೇ ಶೆಟ್ರಲ್ಲಿ ಕೇಳಿ ಮಾತುಕತೆ ಆಗಿತ್ತಂತೆ. ಪಾಪ ಅಂತಕ್ಕನಿಗೆ ಅದು ತಿಳಿಯದು. ತಿಳಿದ ಮೇಲೂ ನಿಮ್ಮಲ್ಲಿ ಹೇಳಲಿಕ್ಕೆ